"ನಿಮ್ಮಲ್ಲಿ ನಿಮಗೆ ಶ್ರದ್ಧೆಯಿರಲಿ. ಸಕಲಶಕ್ತಿಯೂ ನಿಮ್ಮಲ್ಲಿ ಅಡಗಿದೆ! ಇದನ್ನರಿತು ಭಾವಿಸುತ್ತ ಆ ಶಕ್ತಿಯನ್ನು ನಿಮ್ಮ ವ್ಯಕ್ತಿತ್ವದಲ್ಲಿ ಪ್ರಕಟಗೊಳಿಸಿಕೊಳ್ಳಿರಿ ಮತ್ತು ನಿಮಗೆ ನೀವೇ ಹೇಳಿಕೊಳ್ಳಿರಿ: 'ನಾನು ಏನು ಬೇಕಾದರೂ ಸಾಧಿಸಬಲ್ಲೆ' ಎಂದು. ಸರ್ಪದ ವಿಷವೂ ಅದರ ಸತ್ವ ಕಳೆದುಕೊಳ್ಳುವುದೆಂದು ನೀವು ದೃಢವಾಗಿ ಭಾವಿಸಬಲ್ಲಿರಾ? ಆದ್ದರಿಂದ ಎಚ್ಚರ ! ಎಂದಿಗೂ ನಿಮ್ಮೊಳಗಣ ಶಕ್ತಿಯನ್ನು ಅಲ್ಲಗಳೆಯದಿರಿ. ನನ್ನ ಕೈಲೇನೂ ಆಗದು ಎನ್ನದಿರಿ! ನಕಾರಾತ್ಮಕ ಭಾವನೆಗಳನ್ನು ಮನಸ್ಸಿನಿಂದ ಕಿತ್ತೊಗೆಯಿರಿ!"

ಶಿಕ್ಷಕರು, ಅಧ್ಯಾಪಕರು ತಾವು ಪಾಠ ಮಾಡುವಾಗ ಮಧ್ಯೆ ಮಧ್ಯೆ ಇಂತಹ ವ್ಯಕ್ತಿತ್ವ ನಿರ್ಮಾಣಕಾರಿ ವಿಚಾರಗಳನ್ನು ಹೇಳುತ್ತಿರಬೇಕು. ಹಾಗೂ ನೈತಿಕ ಮೌಲ್ಯಗಳಿಗೆ ಹಾಗೂ ಸದ್ಗುಣಗಳಿಗೆ ಆದರ್ಶಪ್ರಾಯರಾದ ವ್ಯಕ್ತಿಗಳ ಚಿತ್ರಣವನ್ನು ಪಾಠಗಳ ನಡುವೆ ಸಂದರ್ಭೋಚಿತವಾಗಿ ವಿದ್ಯಾರ್ಥಿಗಳ ಗಮನಕ್ಕೆ ತರಬೇಕು. ಪ್ರತಿಯೊಂದು ಕ್ಷೇತ್ರದಲ್ಲೂ ಆದರ್ಶ ವ್ಯಕ್ತಿಗಳಾಗಿ ಬಾಳಿದವರು ಬಹುಮಂದಿ ಇದ್ದಾರೆ. ಅವರ ಪರಿಶ್ರಮಪೂರ್ಣವಾದ ಹಾಗೂ ತ್ಯಾಗಮಯವಾದ ಜೀವನವನ್ನು ಆಯಾ ವಿಷಯದ ಶಿಕ್ಷಕರು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಬೋಧಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ಮನಸ್ಸಿನಲ್ಲೂ, 'ತಾನು ಆ ಮಹಾಪುರುಷರಂತಾಗಬೇಕು' ಎಂಬ ಹಂಬಲವನ್ನು ಮೂಡಿಸಬೇಕು. ಉದಾಹರಣೆಗೆ, ವಿಜ್ಞಾನಕ್ಷೇತ್ರದಲ್ಲಿ ಆರ್ಕಿಮಿಡಿಸ್ ಅಥವಾ ಗೆಲಿಲಿಯೊ ಆವಿಷ್ಕರಿಸಿದ ತತ್ತ್ವಗಳನ್ನಷ್ಟೇ ಬೋಧಿಸದೆ, ಅವರ ಶ್ರೇಷ್ಠ ತ್ಯಾಗಜೀವನವನ್ನೂ ಬಣ್ಣಿಸಿ ಹೇಳಬೇಕು.

ಈ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ನೆನಪಿಸಬೇಕಾದ ಒಂದು ಬಹು ಮುಖ್ಯ ಅಂಶವಿದೆ. ಅದೇನೆಂದರೆ ಈ ಮೌಲ್ಯಗಳು, ನೈತಿಕ ಆದರ್ಶಗಳು – ಇವೆಲ್ಲ ಪಾಠಮಾಡಿ ಮನಗಾಣಿಸಬಹುದಾದ ವಿಷಯಗಳಲ್ಲವೇ ಅಲ್ಲ, ಬದಲಾಗಿ ಬದುಕಿ ತೋರಿಸಬೇಕಾದ ಅಂಶಗಳು! "Values are not taught but caught!" – "ಮೌಲ್ಯಗಳೆಂದರೆ ಬರಿ ಪಾಠ ಮಾಡುವಂಥವಲ್ಲ, ಅವು ಗ್ರಹಿಸಬೇಕಾದಂಥವು" ಎಂಬುದು ಚಿರಂತನ ಸತ್ಯ.

ಆದ್ದರಿಂದ, ಈ ದೆಸೆಯಲ್ಲಿ ಸ್ಫೂರ್ತಿದಾಯಕ ಕಥೆ ಘಟನೆಗಳನ್ನು ಹೇಳುವುದು ಬೋಧನೆಯ ಒಂದು ಅಂಗ. ಇನ್ನೊಂದು ಅಂಗವೆಂದರೆ, ಶಿಕ್ಷಕರ ವ್ಯಕ್ತಿತ್ವದಲ್ಲೂ ಆ ಮೌಲ್ಯಗಳು ಕಾಣಸಿಗುವಂತಿರಬೇಕು ಎಂಬುದು. ಇದು ಅತ್ಯಂತ ಮುಖ್ಯವಾದ ವಿಚಾರ. ಏಕೆಂದರೆ ಇಂತಹ ಉದಾತ್ತ ವಿಚಾರಗಳನ್ನು ಶಿಕ್ಷಕರ ಬಾಯಿಂದ ಕೇಳಿದ ಮಕ್ಕಳು, ಆ ಬಳಿಕ ಶಿಕ್ಷಕರ ನಡೆನುಡಿಯನ್ನು ಸೂಕ್ಷ್ಮವಾಗಿ ಗಮನಿಸದಿರುವುದಿಲ್ಲ. ಸದಾ ಸಿಡಿಮಿಡಿಗೊಳ್ಳುವ ಅಧ್ಯಾಪಕನೊಬ್ಬ, "ಭಾವನೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು" ಎಂದು ಸ್ಫೂರ್ತಿಯುತವಾಗಿ ಬೋಧಿಸಿ, ತಾನೆ ಅಡಿಗಡಿಗೆ ರೇಗುತ್ತಿದ್ದರೆ, ಅದೆಂಥ ಹಾಸ್ಯಾಸ್ಪದ ಸನ್ನಿವೇಶ! ಇಂತಹ ವಿಪರ್ಯಾಸಗಳನ್ನು ಕಂಡು ಬೇಸತ್ತ ಮುಗ್ಧ ವಿದ್ಯಾರ್ಥಿಗಳು ಅವರ ಹಿತನುಡಿಗಳಿಗೆ ಕಿವಿಗೊಡದಿದ್ದರೆ ಅದರಲ್ಲಿ ಅಚ್ಚರಿಯೇನಿದೆ? ಅಲ್ಲದೆ ಅಂತಹ ಅಧ್ಯಾಪಕರ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಭಯ ಹುಟ್ಟೀತೇ ಹೊರತು, ಗೌರವ ಮೂಡುವುದಿಲ್ಲ. ಆದ್ದರಿಂದ ಶಿಕ್ಷಕರು ತಮ್ಮ ನಡೆ ನುಡಿಗಳನ್ನು ಪರಿಪಕ್ವಗೊಳಿಸಿಕೊಂಡು ಆದರ್ಶ ವ್ಯಕ್ತಿಗಳಾಗಿ ಮಾರ್ಪಡಬೇಕು. ಇಲ್ಲದಿದ್ದರೆ, ಎಷ್ಟೇ ಕೌಶಲದಿಂದ ಪಾಠ ಮಾಡಿದರೂ, ಅಂಥವರು ವಿದ್ಯಾರ್ಥಿಗಳ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಲಾರರು!


# ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಕ್ಯಾಂಪ್)

**2013 ಜನವರಿ 16 ರಿಂದ 20 ರವರೆಗೆ**

**ಶಿಬಿರದ ತರಗತಿಗಳನ್ನು ನಡೆಸುವ ಮಾಧ್ಯಮ :** ಕನ್ನಡ ಮತ್ತು ಇಂಗ್ಲಿಷ್

ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ : **ರೂ. 1,500/– ಮಾತ್ರ**

*** ಶಿಬಿರದ ಎಲ್ಲ ಐದು ದಿನಗಳೂ ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. * ಕಳೆದ ಜುಲೈ 2012 ರ ಶಿಬಿರದಲ್ಲಿ ಭಾಗವಹಿಸಲು ಅವಕಾಶ ಸಿಗದಿದ್ದವರಿಗೆ ಪ್ರಥಮ ಆದ್ಯತೆ ನೀಡಲಾಗುವುದು. * 145 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. * ಒಂದು ವೇಳೆ ಆಯ್ಕೆಗೊಂಡ ಶಿಬಿರಾರ್ಥಿಗಳು ಬರದೆ ಇದ್ದಲ್ಲಿ ಅವರ ಪ್ರತಿನಿಧಿಯಾಗಿ ಯಾರಿಗೂ ಅವಕಾಶವಿರುವುದಿಲ್ಲ. * ಒಂದು ವೇಳೆ ಶಿಬಿರಾರ್ಥಿಗಳು ಶಿಬಿರಕ್ಕೆ ಬರದೆ ಇದ್ದಲ್ಲಿ ರೂ.1000/– ಮಾತ್ರ ಹಿಂತಿರುಗಿಸಲಾಗುವುದು. * ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ವಿಳಾಸವಿರುವ (10cmx 23cm) ಲಕೋಟೆಗೆ ರೂ.5/– ಅಂಚೆ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. ತುಂಬಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಡಿಸೆಂಬರ್ 15, 2012.**

**Ramakrishna Institute of Moral and Spiritual Education, Yadavagiri, Mysore- 570020**

**Phone: 0821-2417666, e-mail: mysore.rimse@gmail.com**




# ಸಂಸ್ಕೃತಿ ಮತ್ತು ಅಭಿವೃದ್ಧಿಗಳ ಸಂಬಂಧ ಕುರಿತು ಸ್ವಾಮಿ ವಿವೇಕಾನಂದರು

ಜಿ.ಎಸ್. ಜಯದೇವ

ಸ್ವಾಮಿ ವಿವೇಕಾನಂದರು ಭಾರತೀಯ ಮತ್ತು ಪಾಶ್ಚಾತ್ಯ ದೇಶಗಳ ಚರಿತ್ರೆಯನ್ನು ಮತ್ತು ಸಂಸ್ಕೃತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಹಾಗಾಗಿ ಈ ಎರಡೂ ಜನಾಂಗಗಳ ಶಕ್ತಿ ಪರಸ್ಪರ ಪೂರಕವಾಗಿದ್ದರೆ ಅದು ಹೊಸ ನಾಗರಿಕತೆಗೆ ನಾಂದಿಯಾಗುತ್ತದೆ ಎಂಬ ಕನಸನ್ನು ಅವರು ಕಂಡರು. ಈ ಹಿನ್ನೆಲೆಯಲ್ಲಿ ಭಾರತದ ಅಭಿವೃದ್ಧಿಯಲ್ಲಿ ಸಂಸ್ಕೃತಿಯ ಪಾತ್ರ ಕುರಿತು ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಶೀತವಲಯದಲ್ಲಿ ವಾಸಿಸುವ ಪಾಶ್ಚಿಮಾತ್ಯರು ನಿರಂತರವೂ ಚಳಿಯೊಡನೆ ಸೆಣಸುತ್ತ, ಬದುಕಿ ಬಾಳಲು ವಿಶೇಷವಾದ ವಸ್ತುಪರಿಕರಗಳನ್ನು ಹೊಂದಿಸಿಕೊಳ್ಳುತ್ತಾ, ಜೀವನ ಮಾಡುತ್ತ ಬಂದಿದ್ದಾರೆ. ಜೀವವನ್ನೇ ಪಣವಾಗಿಟ್ಟು ಇತರರೊಡನೆ ಸೆಣಸುತ್ತ ಸದಾ ಸ್ಪರ್ಧಾತ್ಮಕವಾಗಿ ಬಾಳುತ್ತಾರೆ. ಕಳೆದ ಅನೇಕ ಸಾವಿರ ವರ್ಷಗಳಿಂದಲೂ ಈ ಬಗೆಯ ಜೀವನಕ್ಕೆ ಹೊಂದಿಕೊಂಡಂತೆ ಅವರ ಸಾಮಾಜಿಕ ರೀತಿನೀತಿಗಳು, ಮನೋಧರ್ಮಗಳು ಬೆಳೆದುಬಂದಿವೆ. ಸುಮಾರು ೨೦೦ ವರ್ಷಗಳಿಂದೀಚೆಗೆ ವಿಜ್ಞಾನದ ಸಹಾಯದಿಂದ ಪ್ರಕೃತಿಯನ್ನು ನಿಯಂತ್ರಿಸಿ ಸುಖಮಯವಾದ ಜೀವನವನ್ನು ಅವರು ನಡೆಸುತ್ತಿದ್ದಾರೆ. ಪ್ರಕೃತಿ ಇವರಿಗೆ ಸದಾ ಸವಾಲಿನ ಪ್ರಶ್ನೆಯಾಗಿ ಎದುರಾಗುವುದರಿಂದ ಅದನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಎಷ್ಟು ಸಾಧ್ಯವೋ ಅಷ್ಟು ನಿಯಂತ್ರಿಸಿ ಸುಖಪಡುವುದೇ ಪಾಶ್ಚಾತ್ಯ ಜೀವನದ ಗುರಿಯಾಗಿದೆ. ಅದೇ ಪ್ರಕಾರ ಪಾಶ್ಚಾತ್ಯರ ಮನೋಧರ್ಮವೂ ಕಾಲಕ್ರಮದಲ್ಲಿ ರೂಪುಗೊಂಡಿದೆ.

ಭಾರತೀಯರಿಗೆ ಹವಾಮಾನದ ಇಂತಹ ವಿಷಮತೆಗಳಾವುವೂ ಕಾಡುವುದಿಲ್ಲ; ಪ್ರಕೃತಿ ಕೇಳಿದ್ದನ್ನೆಲ್ಲಾ ಕೊಡುವ 'ಮಾತೆ'ಯಾಗಿದ್ದಾಳೆ. ಹಾಗಾಗಿ ಎಲ್ಲವನ್ನೂ ಸ್ಪರ್ಧೆಯಿಂದಲೇ ಪಡೆಯಬೇಕಾದ ಪ್ರಮೇಯವೇನೂ ಅವರಿಗಿಲ್ಲ. **'ಯದೃಚ್ಛಾ ಲಾಭ ಸಂತುಷ್ಟಃ'** – 'ಸಿಕ್ಕುದುದರಲ್ಲಿಯೇ ಸಂತೋಷಪಡುವವನು' ಎಂಬ ಭಗವದ್ಗೀತೆಯ ಉಕ್ತಿಯಂತೆ ಅಲ್ಪತೃಪ್ತರಾಗಿಯೇ ಬದುಕು ಕಳೆಯುವ ಮನೋಧರ್ಮವನ್ನು ಭಾರತೀಯರು ಬೆಳೆಸಿಕೊಂಡಿದ್ದಾರೆ. ಸಹಸ್ರಾರು ವರ್ಷಗಳಿಂದಲೂ ಇದೇ ಬಗೆಯ ಜೀವನವಿಧಾನವು ಒಂದು ಬಗೆಯ ನಿರಂತರ ಮನೋಧರ್ಮವಾಗಿ ಬೆಳೆದುಬಂದಿರುವುದರಿಂದ, ಸ್ಪರ್ಧೆ ಸಾಹಸಗಳ ಪಾತ್ರ ಭಾರತೀಯರ ಜೀವನದಲ್ಲಿ ಅತ್ಯಲ್ಪ. ಹಾಗಾಗಿ ಇವರು ತಮ್ಮನ್ನೇ ತಾವು ಸದಾಕಾಲವೂ ಹೊರಪ್ರಪಂಚದಲ್ಲಿ ತೀವ್ರವಾಗಿ ತೊಡಗಿಸಿಕೊಳ್ಳಬೇಕಾದ ಜರೂರು ಎದುರಾಗಲೇ ಇಲ್ಲ. ಆದ್ದರಿಂದ ಅನೇಕರು ಅಂತರ್ಮುಖಿಗಳಾಗಿ ಒಳಜಗತ್ತಿನ ರೋಚಕತೆಗಳನ್ನು ಅನ್ವೇಷಿಸುವ ಸಾಹಸಕ್ಕೆ ಕೈಹಾಕಿದರು. ಕೆಲವರು ಸಾಧುಗಳು, ಸಂತರು ಆದರು. ಬದುಕಿಗೆ ಏನಾದರೂ ಗುರಿ ಇರುವುದಾದರೆ ಅದು ನಮ್ಮೊಳಗೇ ನಡೆಸುವ ಹುಡುಕಾಟ ಎಂಬ ಆದರ್ಶವನ್ನು ಕಂಡುಕೊಂಡು, ಅಧ್ಯಾತ್ಮ ಪರಂಪರೆಗೆ ನಾಂದಿ ಹಾಡಿದರು. ಆದರೆ ದುರದೃಷ್ಟವೆಂದರೆ, ಭಾರತದ ಉಳಿದ ಬಹಳಷ್ಟು ಜನ ಸೋಮಾರಿಗಳು, ಮಂದಮತಿಗಳು, ತಾಮಸಿಗಳು ಆಗಿರುವುದನ್ನು ಸ್ವಾಮಿ ವಿವೇಕಾನಂದರೇ ಗುರುತಿಸಿದ್ದಾರೆ.

ಹೀಗೆ ಪ್ರಕೃತಿ ಪರಿಸರಗಳ ವಿಭಿನ್ನ ಪ್ರಭಾವಗಳಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಮನಸ್ಸುಗಳು ಬೇರೆ ಬೇರೆಯಾಗಿ ರೂಪುಗೊಂಡಿವೆ. ಎರಡು ಸಂಸ್ಕೃತಿಗಳಲ್ಲಿಯೂ ತನ್ನದೇ ಆದ ದೌರ್ಬಲ್ಯ–ಶಕ್ತಿಗಳು ಅಡಗಿರುವುದನ್ನು ಸ್ವಾಮೀಜಿ ಗುರುತಿಸಿದರು. ಭಾರತೀಯ ಮತ್ತು ಪಾಶ್ಚಾತ್ಯ ಮನಸ್ಸುಗಳು ತಮ್ಮ ಶಕ್ತಿಯನ್ನು ಒಂದಕ್ಕೊಂದು ಪೂರಕವಾಗಿ ಬಳಸಿಕೊಂಡರೆ ಪಾಶ್ಚಿಮಾತ್ಯರಿಗೆ ಅಧ್ಯಾತ್ಮವೂ, ಭಾರತೀಯರಿಗೆ ಬದುಕಿಗೆ ಅಗತ್ಯವಾದ ಲೌಕಿಕ ಜ್ಞಾನವೂ ಲಭಿಸುತ್ತದೆ ಎಂದು ಅವರು ಹೇಳಿದರು. ಅಧ್ಯಾತ್ಮ ಮತ್ತು ಲೌಕಿಕ ಬದುಕು – ಈ ಎರಡೂ ಸಮಾನವಾಗಿ ಮುಖ್ಯ ಎಂದು ಸ್ವಾಮೀಜಿಯವರು ಸ್ಪಷ್ಟವಾಗಿ ತಿಳಿಸುತ್ತಾರೆ. ಬಂಡವಾಳವಿಲ್ಲದೆ ಬಡಾಯಿ ಕೊಚ್ಚುವ ಭಾರತೀಯರನ್ನು, "ನಿಮ್ಮ ಕೈಲಿ ಒಂದು ಒಳ್ಳೆಯ ಸೂಜಿಯನ್ನೂ ಕೂಡ ತಯಾರಿಸಲು ಸಾಧ್ಯವಾಗಿಲ್ಲ, ಆದರೆ ಆಂಗ್ಲ ನಾಗರಿಕತೆಯನ್ನು ಟೀಕಿಸುತ್ತೀರಿ; ಎಂತಹ ಮೂರ್ಖರು ನೀವು" ಎಂದು ಅವರು ಛೇಡಿಸುತ್ತಾರೆ.

ಆದರೆ ಭಾರತೀಯರು ಆಂಗ್ಲರಿಂದ ಏನೇ ಪಡೆದರೂ ನಮ್ಮ ಭಾರತೀಯತೆಯನ್ನು ಕಾಪಾಡಿಕೊಳ್ಳಬೇಕೆಂದೂ, ಹಾಗೆಯೇ ಪಾಶ್ಚಿಮಾತ್ಯರು ಸಹ ತಮ್ಮತನವನ್ನು ಕಳೆದುಕೊಂಡು ಭಾರತದ ಅಧ್ಯಾತ್ಮವನ್ನು ಪಡೆಯುವ ಅಗತ್ಯವಿಲ್ಲವೆಂದೂ ಸ್ವಾಮೀಜಿ ತಿಳಿಸುತ್ತಾರೆ. ಭಾರತೀಯರು ಮತ್ತೊಂದು ಜನಾಂಗವಾಗಿ ಮಾರ್ಪಾಡಾಗಲು ಸಾಧ್ಯವೇ ಇಲ್ಲ ಎನ್ನುತ್ತ, "ಭಾರತದ ಹಿಂದೂಜನಾಂಗ ರಷ್ಯನ್ನರಾಗಿಬಿಡಲು ಸಾಧ್ಯವೇ?" ಎಂದು ಕೇಳುತ್ತಾರೆ. ನಮ್ಮ ಅಭಿವೃದ್ಧಿಯು ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಇರಬೇಕೆಂಬುದು ಅವರ ಅಭಿಮತ. ಅನಗತ್ಯವಾದ ಯಂತ್ರಗಳ ಬಳಕೆಯನ್ನು ಸ್ವಾಮೀಜಿ ಒಪ್ಪುತ್ತಿರಲಿಲ್ಲ. ಅವರು ಹೇಳುತ್ತಾರೆ, "ನಾವು ಕಂಡುಹಿಡಿದು ಬಳಕೆಗೆ ತಂದ